


**ಪ.ರಾಮಕೃಷ್ಣ ಶಾಸ್ತ್ರಿ**
ಕಲೆ: ಸಂತೋಷ್ ಸಸಿಹಿತ್ಲು

# ಪುಟಾಣಿ ಪದ್ಯಗಳು



ಕೋತಿಮರಿಯ ತಂಟೆಗೆ ತಾಯಿ
ಬೇಸತ್ತು ಗದರುತ್ತೆ ಜೋರು
ಸುಮ್ನೆ ನೀನು ಇರ್ಲಿಲ್ಲಾಂದ್ರೆ
ಮನುಷ್ಯನಿಗೆ ಕೊಡ್ತೀನಿ ಹುಷಾರು!

ಅಜ್ಜಿಯ ಬೊಚ್ಚು ಬಾಯಿ
ಎಲಡಿಕೆ ಅರೆಯೋ ಮಿಕ್ಸಿ
ಕೆಂಪನೆ ಹನಿಗಳ ಸಿಂಪಡಿಸ್ತಾಳೆ
ಬಂದ್ರೆ ಅವಳಿಗೆ ಆ... ಕ್ಷೀ





ಒಂದಕ್ಕೆ ಒಂದು ಕೂಡಿದರೆಷ್ಟು?
ಉತ್ತರಿಸೋದೇ ಬೋರು
ಪುಟ್ಟನು ಮಮ್ಮಿಗೆ ಹೇಳಿದ ಬೇಗ
ತಂದ್ಕೊಡು ಕ್ಯಾಲ್ಕುಲೇಟರ್

ಭಾರತದೇಶ ಕೊಟ್ಟದ್ದೇನು
ವಿಶ್ವಕೆ ಹೇಳೇ ಚೆನ್ನೆ?
ಅಯ್ಯೋ ಬಿಡ್ರೀ ನಂಗೊತ್ತಿಲ್ವ!
ದೊಡ್ಡ ಕೊಡುಗೆಯಿದು 'ಸೊನ್ನೆ'



ನವಿಲು ಥಕಥೈ ಕುಣಿಯೋದ್ಕಂಡು
ಪುಟ್ಟಿಯು ಮುಚ್ಚದೆ ಕಣ್ಣ
ಕೇಳಿಯೇಬಿಟ್ಳು ಯಾವ ಟೀಚರು
ಕಲಿಸಿಕೊಟ್ರೇ ಇದನ್ನ?

ಸುಬ್ಬಾಭಟ್ರಿಗೆ ಹೇಳಿತು ಹುಂಜ
ನೋಡೋ ಭಟ್ಟಾ ಕಣ್ಬಿಟ್ಟು
ನಾನೂ ನೀನೂ ಒಂದೇ ಜಾತಿ
ನಂಗೂ ನೆತ್ತೀಲಿ ಜುಟ್ಟು

ಶೆಟ್ರ ಹೊಟ್ಟೆ ದಿನೇ ದಿನೇ
ದೊಡ್ಡದು ದೊಡ್ಡದು ಆಗುತ್ತೆ
ಕೆಳಗಡೆ ಬೆಕ್ಕು ಕುಳಿತು ಕೇಳುತ್ತೆ
ಬಲೂನು ಯಾವಾಗ ಒಡೆಯುತ್ತೆ?

